ಮಾಡುತ್ತೇವೆ. ಇದು ಮುಖ್ಯಮಂತ್ರಿಗಳಿಗೆ ಹೋಗುವುದಾ ಇಲ್ಲವಾ ಎಂದು. ಎಕ್ಸಾಮಿನ್ ಮಾಡಿ ನೆಕ್ಸ್ಟ್ ವೀಕ್‌ನಲ್ಲಿ ಯಾವಾಗ ಹಾಕಬೇಕು ಆಗ ಪ್ರಶ್ನೆ ಬರುತ್ತದೆ.

ಚಿಕ್ಕಮಗಳೂರು ಜಿಲ್ಲೆಯ ಅಬ್ಬೆ ಜಲಪಾತದಿಂದ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವಾಣಿವಿಲಾಸ ಸಾಗರಕ್ಕೆ ನೀರೊದಗಿಸುವುದು.

20 (320)

ಶ್ರೀ ಮಲ್ಲಿಕಾರ್ಜುನ ಕೆ.ಜಿ. (ಬೀರೂರು): ಮಾನ್ಯ ಬೃಹತ್ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ವಾಣಿವಿಲಾಸ ಸಾಗರಕ್ಕೆ ಚಿಕ್ಕಮಗಳೂರು ಜಿಲ್ಲೆ ಅಬ್ಬೆ ಜಲಪಾತದಿಂದ ನೀರೊದಗಿಸಲು ಸರ್ಕಾರ ಯೋಚಿಸಿದೆಯೇ;

ಆ. ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ವೆಚ್ಚವೆಷ್ಟು; ಮತ್ತು ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ.ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):

ಅ. ದಿನಾಂಕ 18-2-2000ರಂದು ವಿಧಾನ ಸಭೆ, ವಿಧಾನ ಪರಿಷತ್ ಸದಸ್ಯರೊಡನೆ ನಡೆದ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಈ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಸರ್ವೆ ಕಾರ್ಯ ಕೈಗೊಳ್ಳಲು ತೀರ್ಮಾನಿಸಲಾಯಿತು. ಈ ಯೋಜನೆ ತನಿಖಾ ಹಂತದಲ್ಲಿದೆ.

ಆ. ವಿವರವಾದ ಅಂದಾಜುಗಳು ತಯಾರಿಸಿದ ನಂತರ ನಿಖರವಾದ ಯೋಜನಾ ವೆಚ್ಚ ತಿಳಿದುಬರುತ್ತದೆ.

ಶ್ರೀ ಮಲ್ಲಿಕಾರ್ಜುನ: ಮಾನ್ಯ ಸಭಾಧ್ಯಕ್ಷರೆ, ಈ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಮನಸ್ಸು ಮಾಡಿದ್ದಕ್ಕೆ ಧನ್ಯವಾದಗಳು.

ಅಧ್ಯಕ್ಷರು: ಅದಕ್ಕೆ ಮುಂಚೆ ಇನ್ನೊಂದು ವಿಚಾರ ಹೇಳಬೇಕು. ಮಾನ್ಯ ಗೃಹ ಮಂತ್ರಿಗಳ ಪ್ರಶ್ನೆಗೆ ಉತ್ತರ ಇವತ್ತಿನ ದಿವಸ ಬೆಳಿಗ್ಗೆ 11.30ಕ್ಕೆ ಬಂದಿದೆ. ಎಲ್ಲಾ

ಮಂತ್ರಿಗಳಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ಇವತ್ತು ಈ ಪ್ರಶ್ನೆ ಇದ್ದರೆ ನಾವು ಪಟ್ಟಿಯಲ್ಲಿ ಹಾಕಿ ಬಿಟ್ಟಿರುತ್ತೇವೆ. ಅವತ್ತು ಬೆಳಿಗ್ಗೆ ಉತ್ತರ ಬಂದರೆ ನಾವು ಹೇಗೆ ಅದನ್ನೆಲ್ಲಾ ಸ್ಟೆನ್ಸಿಲ್ ಮಾಡುವುದು? ಮಾನ್ಯ ಸದಸ್ಯರು ಈಗ ಉತ್ತರ ಬಂದಿಲ್ಲ ಎಂದು ಹೇಳಿದರು. ಅಟ್‌ಲೀಸ್ಟ್ ಇವತ್ತಿನ ಉತ್ತರ ಏನು ಇದೆಯೋ ಅದನ್ನು ನಿನ್ನೆ ರಾತ್ರಿ ಎಷ್ಟು ಹೊತ್ತಿಗಾದರೂ ಕಳುಹಿಸಿ. 11 ಗಂಟೆಯವರೆಗೆ ಸ್ಟೆನ್ಸಿಲ್ ಇಟ್ಟಿರುತ್ತೇವೆ. ಮಾನ್ಯ ಸದಸ್ಯರುಗಳಿಗೆಲ್ಲಾ ಉತ್ತರ ಕಳುಹಿಸಿಕೊಡಲು ಅನುಕೂಲ ಆಗುತ್ತದೆ. ದಯವಿಟ್ಟು ಮುಂದೆ ಆ ರೀತಿ ಪಾಲಿಸಬೇಕು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಚಿಕ್ಕಮಗಳೂರು ಜಿಲ್ಲೆ ಅಬ್ಬೆ ಜಲಪಾತದಿಂದ ಮೊದಲಕೆರೆ ಮೂಲಕ ಈ ಒಂದು ವಾಣಿ ವಿಲಾಸ ಸಾಗರಕ್ಕೆ ನೀರು ತಗೆದುಕೊಂಡು ಹೋಗುವುದಕ್ಕೆ ಒಂದು ಯೋಜನೆಗೆ ಪ್ರಥಮ ಹೆಜ್ಜೆಯನ್ನು ಸರ್ಕಾರ ಮಂಜೂರು ಮಾಡಿದ್ದಕ್ಕೋಸ್ಕರ ಮೊದಲು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸರ್ವೆ ಕಾರ್ಯ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಈ ಸರ್ವೆ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಗುವುದು? ಎರಡನೆಯ ಪ್ರಶ್ನೆ ಯಾರಿಂದ ಸರ್ವೆಯನ್ನು ಮಾಡಿಸಲಾಗುವುದು? ಮೂರನೆಯ ಪ್ರಶ್ನೆ ಸರ್ವೆ ಕಾರ್ಯವನ್ನು ಎಷ್ಟು ಸಮಯದಲ್ಲಿ ಮುಗಿಸುತ್ತೀರಿ? ಮೂರನೆಯ ಪ್ರಶ್ನೆಯನ್ನು ಏಕೆ ಹೀಗೆ ಕೇಳುತ್ತಿದ್ದೇನೆ ಎಂದರೆ ಅನೇಕ ಅನ್ವೇಷಣೆಗಳನ್ನು ಮಾಡಿ ಎಂದು ಹೇಳತಕ್ಕ ಸರ್ಕಾರಿ ಆದೇಶಗಳು ಬರುತ್ತವೆ. ಸುಮಾರು 5-10 ವರ್ಷಗಳಾದರೂ ಸರ್ವೆ ಕಾರ್ಯ ಮುಗಿಯುವುದಿಲ್ಲ. ಹಾಗಾಗಿ ನಿಗದಿತ ಸಮಯದಲ್ಲಿ ಸರ್ವೆ ಕಾರ್ಯವನ್ನು ಮುಗಿಸಲು ಸರ್ಕಾರ ಮನಸ್ಸು ಮಾಡುತ್ತದೆಯೇ ಎನ್ನತಕ್ಕ ಮೂರು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಹೆಚ್.ಕೆ.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಫೆಬ್ರವರಿ 18ನೇ ತಾರೀಖಿನಂದು ಚಿಕ್ಕಮಗಳೂರಿನ ಜಿಲ್ಲಾ ಶಾಸಕರುಗಳ ಹಾಗೂ ಲೋಕಸಭಾ ಸದಸ್ಯರುಗಳ ಸಮ್ಮುಖದಲ್ಲಿ ಒಂದು ಸಭೆ ನಡೆದಂಥ ಸಂದರ್ಭದಲ್ಲಿ ಅಬ್ಬೆ ಹಳ್ಳದ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಸರ್ಕಾರ ಅಂತಿಮ ಘಟ್ಟದ ಒಂದು ಚರ್ಚೆ ನಡೆಸಿತು. ಸದರಿ ಯೋಜನೆಯನ್ನು ಕೈಗೊಳ್ಳುವುದರಿಂದ ಇದೊಂದು ಉಪಯುಕ್ತ ಯೋಜನೆಯಾಗಿ ಪ್ರಯೋಜನಕಾರಿಯಾಗುತ್ತದೆಂಬ ನಿರ್ಣಯಕ್ಕೆ ಸರ್ಕಾರ ಬಂದಿದ್ದು, ಯೋಜನೆಯ ಇನ್‌ವೆಸ್ಟಿಗೇಶನ್ ಕಾರ್ಯ ಪ್ರಾರಂಭವಾಗಬೇಕಿರುವುದರಿಂದ ಈ ಕಾರ್ಯವನ್ನು ನಾವು ನಮ್ಮ ಇಲಾಖೆಯಿಂದಲೇ ಮಾಡುತ್ತಿದ್ದೇವೆ. ಯೋಜನೆಯ ಡೀಟೇಲ್ ಸರ್ವೆಯನ್ನು ಇಲಾಖೆ ವತಿಯಿಂದ ಮಾಡಿಸಲಾಗುತ್ತದೆಯೇ? ಅಥವಾ ಯಾರ ಕಡೆಯಿಂದ ಮಾಡಿಸಲಾಗುತ್ತದೆ? ಎಂದು ತಾವು ಕೇಳಿರುವುದಕ್ಕೆ ಹೇಳುವುದಾದರೆ ಯೋಜನೆಯ ಒಟ್ಟು ಕೆಲಸದ ಗಾತ್ರವನ್ನು

ಗಮನದಲ್ಲಿಟ್ಟುಕೊಂಡು ಇಲಾಖೆಯಲ್ಲಿರುವ ಸರ್ವೇಯರ್‌ಗಳಿಂದ ಮಾಡಿಸಿದಲ್ಲಿ ವಿಳಂಬವಾಗುತ್ತದೆಂದರೆ ಬೇರೆ ಸ್ವಾಯತ್ತ ಸಂಸ್ಥೆಗೆ ವಹಿಸಿಕೊಡುತ್ತೇವೆ. ಇಲ್ಲದಿದ್ದರೆ, ಒಂದು ವರ್ಷದ ಅವಧಿಯೊಳಗೆ ಸದರಿ ಕಾರ್ಯವನ್ನು ಇಲಾಖೆಯವರೇ ಮುಗಿಸುವುದು ಸಾಧ್ಯವಾಗುವುದಿದ್ದರೆ ಇಲಾಖೆಯ ಮುಖಾಂತರವೇ ಮಾಡಿಸುತ್ತೇವೆ ಮತ್ತು ಅಂದಾಜು ಮಾಡುವ ಕೆಲಸವನ್ನೂ ಸಹ ಪೂರ್ತಿಗೊಳಿಸುತ್ತೇವೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ವೆ ಮಾಡುವ ಸಲುವಾಗಿ ನೀರಾವರಿ ಇಲಾಖೆಯಿಂದ ಹಣವನ್ನು ಮಂಜೂರು ಮಾಡಲಾಗಿದೆಯೇ?

ಶ್ರೀ ಹೆಚ್.ಕೆ.ಪಾಟೀಲ್: ಸರ್ವೆ ಕಾರ್ಯಕ್ಕೆ ಎಷ್ಟು ಹಣಕಾಸು ಸೌಲಭ್ಯ ಬೇಕಾಗುತ್ತದೆಯೋ ಅಷ್ಟನ್ನು ಸರ್ಕಾರ ಒದಗಿಸಿಕೊಡುತ್ತದೆ.

ಅಧ್ಯಕ್ಷರು: ಪುಟ್ಟರಂಗನಾಥ್‌ರವರೇ, ತಮ್ಮ ಪ್ರಶ್ನೆ 378ಕ್ಕೆ ಉತ್ತರ ಇನ್ನೂ ಬಂದಿಲ್ಲವಾದ್ದರಿಂದ ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಶ್ರೀ ಎಸ್.ಹೆಚ್.ಪುಟ್ಟರಂಗನಾಥ್: ಮಾನ್ಯ ಅಧ್ಯಕ್ಷರೆ, ಪ್ರಶ್ನೆಗಳ ಪಟ್ಟಿಯಲ್ಲಿ ಮಾನ್ಯ ಸದಸ್ಯರುಗಳು ಕೇಳಿರುವಂಥ ಪ್ರಶ್ನೆಗಳಿಗೆ ಸಂಬಂಧಪಟ್ಟ ಸಚಿವರುಗಳು ಉತ್ತರಗಳನ್ನು ಒದಗಿಸಿಕೊಡಬೇಕಾಗುತ್ತದೆ. ಪ್ರಶ್ನೆ ಮುದ್ರಿತವಾಗಿ ಅದಕ್ಕೆ ಉತ್ತರ ಬಂದಿಲ್ಲವೆಂದರೆ ಏನರ್ಥ? ದಯಮಾಡಿ ಇನ್ನು ಮುಂದೆ ಪ್ರಶ್ನೆ ಜೊತೆಗೆ ಉತ್ತರವನ್ನು ಒದಗಿಸಿಕೊಡುವಂತೆ ವ್ಯವಸ್ಥೆಯಾಗಬೇಕು.

ಅಧ್ಯಕ್ಷರು: ತಾವು ಕೇಳಿರುವಂಥ ಪ್ರಶ್ನೆಗೆ ಇನ್ನೂ ಉತ್ತರ ಬಂದಿರುವುದಿಲ್ಲವಾದ್ದರಿಂದ ಉತ್ತರ ಬಂದ ತಕ್ಷಣವೇ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸಿ ತಮಗೆ ಕಳುಹಿಸಿಕೊಡುತ್ತೇನೆ. ಆದುದರಿಂದ, ತಾವು ಇನ್ನೊಂದು ದಿವಸ ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್.ಹೆಚ್.ಪುಟ್ಟರಂಗನಾಥ್: ಕೇಳಿರುವಂಥ ಪ್ರಶ್ನೆಗೆ ಉತ್ತರ ಬಾರದೇ ಕೇವಲ ಪ್ರಶ್ನೆ ಬಂದರೆ, ಮತ್ತು ಅದನ್ನು ಇನ್ನೊಂದು ದಿವಸ ಕೇಳಿ ಎಂದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪುಟ್ಟರಂಗನಾಥ್‌ರವರು ಹಿಂದೆ ಶಾಸಕರಾಗಿದ್ದಾಗಿನ ತಮ್ಮ ಅನುಭವದ ವಿಚಾರಗಳನ್ನು ಹೇಳುತ್ತಿದ್ದಾರೆ. ನಾಳೆ ದಿವಸ ಸದನದಲ್ಲಿ ಕೇಳುವಂಥ ಪ್ರಶ್ನೆಗಳಿದ್ದರೆ ಹಿಂದಿನ ದಿವಸದ ರಾತ್ರಿ ಸದಸ್ಯರುಗಳಿಗೆ ಒದಗಿಸಿಕೊಡುವಂಥ ಮಾಹಿತಿಯಲ್ಲಿ ಕೇವಲ ಚುಕ್ಕೆ ಗುರ್ತಿನ ಪ್ರಶ್ನೆಗಳು ಮಾತ್ರವಿದ್ದು ಅದಕ್ಕೆ ಉತ್ತರಗಳಿರುವುದಿಲ್ಲ. ಉತ್ತರಗಳನ್ನು ಮರುದಿನ ಬೆಳಿಗ್ಗೆ ಸದನಕ್ಕೆ ಬಂದಾಗ ಸರಬರಾಜು ಮಾಡುತ್ತಾರೆ. ಅವರು ಶಾಸಕರಾಗಿದ್ದ